ಸಂಪುಟ Volume 60 | ಸಂಚಿಕೆ Issue 44 | ಪುಟ Pages 12+12
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere

ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ
samyukthakarnataka
ಎಂಟು ದಶಕದ ನಂಟು



ಮದುವೆಯಾದ ಮರು ದಿನವೇ ಬಿಕಾನೇರ್‌ನಲ್ಲಿ ಬಿಎ ಪರೀಕ್ಷೆ ಬರೆಯುತ್ತಿರುವ ಯುವತಿ.
ಶನಿವಾರ 10 Saturday | ಮಾರ್ಚ್ 2018 March | ₹5-00
ತ್ರಿಪುರಾದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಬಿಪ್ಲವ್‌ಕುಮಾರ್‌ದೇವ್.

# ವಿಶ್ವ 10k; ಹೆಸರು ನೋಂದಣಿ ಕಾರ್ಯಕ್ಕೆ ಚಾಲನೆ

**ಬೆಂಗಳೂರು:** ವಿಶ್ವದ ರಸ್ತೆ ಓಟಗಳಲ್ಲೇ ಅತ್ಯಂತ ಜನಪ್ರಿಯ ಹಾಗೂ ಒಂದು ದಶಕ ಪೂರೈಸಿ 11ನೇ ಆವೃತ್ತಿಗೆ ಕಾಲಿಡುತ್ತಿರುವ ಟಾಟಾ ಕನ್ಸ್‌ಲ್ಟೆನ್ಸಿ ಸರ್ವಿಸಸ್ ವಿಶ್ವ 10ಕೆಗೆ ಬೆಂಗಳೂರು ನಗರ ಮತ್ತೊಮ್ಮೆ ಆತಿಥ್ಯ ವಹಿಸುತ್ತಿದೆ. ಈ ಸಂಬಂಧ ಓಟದ ಪ್ರಾಯೋಜಕತ್ವ ಹೊಂದಿರುವ ಪ್ರೋಕ್ಯಾಮ್ ಇಂಟರ್‌ನ್ಯಾಷನಲ್, ವಿಶ್ವದ ಅತ್ಯಂತ ಪ್ರತಿಷ್ಠಿತ 10ಕೆ ಓಟಕ್ಕೆ ಮಾರ್ಚ್ 8 ರಂದು ನೋಂದಣಿ ಪ್ರಕ್ರಿಯೆ ಆರಂಭವಾಯಿತು.

ಟಿಸಿಎಸ್ ಬ್ಯಾನರ್ ಅಡಿಯಲ್ಲಿ ಎಂಟು ಬಾರಿ ಆಯೋಜನೆಗೊಂಡಿರುವ ಈ ಟಿಸಿಎಸ್ ವಿಶ್ವ 10ಕೆ ಓಟಕ್ಕೆ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ಮೇ 13ರಂದು ಭಾನುವಾರ ಚಾಲನೆ ನೀಡಲಾಗುತ್ತದೆ. ಐಎಎಎಫ್ ಗೋಲ್ಡ್ ಲೆಬಲ್ ರೇಸ್‌ನಲ್ಲಿ ಐದು ವಿಭಾಗಗಳನ್ನು ವರ್ಗೀಕರಿಸಲಾಗಿದೆ. ಆತಿಥೇಯ ದೇಶದ ಓಟಗಾರರು, ವಿಶ್ವದ ಶ್ರೇಷ್ಠ ಟ್ರ್ಯಾಕ್ ಮತ್ತು ಫೀಲ್ಡ್ ಹಾಗೂ ರಸ್ತೆ ಓಟಗಾರರು, ಎಲೈಟ್ ವಿಶ್ವ 10ಕೆ ಪುರುಷ ಮತ್ತು ಮಹಿಳಾ ಓಟಗಾರರು ಈ ರೇಸ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

ಅಮೆಚೂರ್ ರನ್ನರ್ಸ್‌ಗಳು ಓಪನ್ 10ಕೆ ವಿಭಾಗದಲ್ಲಿ ಸ್ಪರ್ಧಿಸಿದರೆ, ಓಟದ ಉತ್ಸಾಹಿಗಳು 5.7 ಕಿ.ಮಿ. ಮಜ್ಜ ರನ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. 4 ಕಿ.ಮಿ. ಹಿರಿಯ ನಾಗರಿಕರ ಓಟದಲ್ಲಿ 60 ವರ್ಷ ಮೇಲ್ಪಟ್ಟ ಮತ್ತು ವಿಶೇಷ ಚೇತನರು ಹಾಗೂ ಅಂಗವಿಕಲರು ಸ್ಪರ್ಧಿಸಬಹುದಾಗಿದೆ.

ಮಾರ್ಚ್ 8ರಂದು ಓಟಗಾರರ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಏಪ್ರಿಲ್ 20ಕ್ಕೆ ಮುಕ್ತಾಯವಾಗಲಿದೆ. ಇಲ್ಲವೇ ರನ್ನಿಂಗ್ ಸ್ಲಾಟ್ ಇರುವವರೆಗೂ ಎಲ್ಲಾ ವಿಭಾಗಗಳ ನೋಂದಣಿ ಮುಂದುವರಿಯಲಿದೆ. ಸೆಲೆಬ್ರಿಟಿ ಹಾಗೂ ನಟ ಪುನೀತ್ ರಾಜ್‌ಕುಮಾರ್ ಟಿಸಿಎಸ್ ವಿಶ್ವ 10ಕೆ ಜತೆಗಿನ ತಮ್ಮ ಬಾಂಧವ್ಯವನ್ನು ಈ ಬಾರಿಯೂ ಮುಂದುವರಿಸಿದ್ದಾರೆ.

11ನೇ ಆವೃತ್ತಿಯ ಟಿಸಿಎಸ್ ವಿಶ್ವ 10ಕೆ ಕುರಿತು ಪ್ರತಿಕ್ರಿಯಿಸಿರುವ ಪುನೀತ್ ರಾಜ್‌ಕುಮಾರ್, ನನ್ನ ವೇಳಾಪಟ್ಟಿಯಲ್ಲಿ ಪ್ರತಿ ವರ್ಷ ಈ ಕೂಟವನ್ನು ಎದುರು ನೋಡುತ್ತಿರುತ್ತೇನೆ. 11ನೇ ಆವೃತ್ತಿಯಲ್ಲಿ ಪಾಲ್ಗೊಳ್ಳುತ್ತಿರುವ ಪ್ರೋಕ್ಯಾಮ್ ಇಂಟರ್‌ನ್ಯಾಷನಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್, ತೆರೆದ ಕೈಗಳಲ್ಲಿ ಬೆಂಗಳೂರು ವರ್ಷದಿಂದ ವರ್ಷಕ್ಕೆ ನಮ್ಮನ್ನು ಸ್ವಾಗತಿಸುತ್ತಿದೆ. ನಗರದ ಬದ್ಧತೆ ಮತ್ತು ಉತ್ಸಾಹಿಗಳ ಓಟದಿಂದಾಗಿ ಪ್ರತಿವರ್ಷ ಹೊಸ ಓಟದ ಕಥೆಗಳು ಹುಟ್ಟುತಲೇ ಇವೆ. ರನ್ನಿಂಗ್ ವೇಳಾಪಟ್ಟಿಯಲ್ಲಿ ಇದು ಅತ್ಯಂತ ಆಕರ್ಷಣೀಯ ವಾದ ಓಟವಾಗಿದೆ. ಐಎಎಎಫ್ ಗೋಲ್ಡ್ ಲೇಬಲ್ ರೇಸ್ ಶ್ರೇಷ್ಠ ರಸ್ತೆ ಮತ್ತು ಟ್ರ್ಯಾಕ್ ರೇಸ್‌ರ್‌ಗಳನ್ನು ಜಾಗತಿಕವಾಗಿ ಆಕರ್ಷಿಸಿದೆ. ಇದರ ಯಶಸ್ಸು ಎಲ್ಲಾ ಷೇರುದಾರರಿಗೂ, ನಗರ ಅಧಿಕಾರಿಗಳಿಗೂ, ನಮ್ಮ ಪ್ರಾಯೋಜಕರು ಮತ್ತು ಪಾಲುದಾರರಿಗೂ ಹಾಗೂ ನಮ್ಮ ಓಟಗಾರರಿಗೂ ಸಲ್ಲುತ್ತದೆ. ನಿಮ್ಮ ಬೆಂಬಲಕ್ಕೆ ಎಲ್ಲರಿಗೂ ಕೃತಜ್ಞತೆ ಹೇಳಲು ಬಯಸುತ್ತೇನೆ ಎಂದರು.

ಎಲ್ಲ ಮಹಿಳಾ ಪೇಸರ್ ಸಮುದಾಯ ಪಾಲ್ಗೊಳ್ಳುವ ಕುರಿತು ಪ್ರೋಕ್ಯಾಮ್ ಇಂಟರ್ ನ್ಯಾಷನಲ್ ಖಚಿತಪಡಿಸಿದೆ. ನಗರದಲ್ಲಿ ಮಹಿಳಾ ರನ್ನಿಂಗ್ ಸಮುದಾಯ ಬೆಳವಣಿಗೆ ಯನ್ನು ಗುರುತಿಸುವ ಭಾಗವಾಗಿ ಈ ವರ್ಷ ಪ್ರೋಕ್ಯಾಮ್ ಇಂಟರ್ ನ್ಯಾಷನಲ್ ಓಪನ್ 10ಕೆ ವಿಭಾಗದಲ್ಲಿ ಎಲ್ಲಾ ಮಹಿಳಾ ಸಮುದಾಯದ ಪೇಸರ್ಸ್‌ಗಳು ಪಾಲ್ಗೊಳ್ಳುವುದನ್ನು ಪ್ರಕಟಿಸುತ್ತಿದೆ. 15 ಮಹಿಳಾ ಪೇಸರ್‌ಗಳು 10 ಕಿಲೋ ಮೀಟರ್ ದೂರದಲ್ಲಿ 8 ಸಮಯಾವಗಳಲ್ಲಿ ವಿಭಜನೆಗೊಳ್ಳುತ್ತಾರೆ. 55 ನಿಮಿಷದಿಂದ 75 ನಿಮಿಷ, 60 ನಿಮಿಷದಿಂದ 80 ನಿಮಿಷ, 65 ನಿಮಿಷದಿಂದ 85ನಿಮಿಷ, 70 ನಿಮಿಷದಿಂದ 90 ನಿಮಿಷದವರೆಗೆ ವಿಭಜನೆಯಾಗುತ್ತಾರೆ. ಟಿಸಿಎಸ್ ವಿಶ್ವ 10ಕೆಯಲ್ಲಿ ಪ್ರಾಥಮಿಕವಾಗಿ ಇದನ್ನು ಸೇರಿಸಲಾಗಿದೆ. ಸಮಯಾವ ಪ್ರಮಾಣಪತ್ರ ಇಲ್ಲದೆ ಪಾಲ್ಗೊಳ್ಳುವ ಮಹಿಳಾ ಸ್ಪರ್ಧೆಗಳಿಗೆ ಇದು ಸೀಮಿತವಾಗಿರುತ್ತದೆ. ಎಂದಿನಂತೆ ಟಿಸಿಎಸ್ ವಿಶ್ವ 10ಕೆಯಲ್ಲಿ ಆದ್ಯತೆ ಲೈನ್ ಅಪ್ ಮುಂದುವರಿಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ. ಕರ್ನಾಟಕ ವಿಧಾನಸಭಾ ಚುನಾವಣೆ ಸದ್ಯದಲ್ಲೇ ಜರುಗಲಿದ್ದು, ಇದು ರೇಸ್ ದಿನವೇ ನಡೆಯುವ ಸಾಧ್ಯತೆ ಇದೆ. ಒಂದು ವೇಳೆ ಹೀಗಾದ್ದಲ್ಲಿ ರೇಸ್ ದಿನಾಂಕವನ್ನು ಬದಲಾಯಿಸಲಾಗುತ್ತದೆ. ಈ ಕುರಿತು ಪ್ರೋಕ್ಯಾಮ್ ಇಂಟರ್‌ನ್ಯಾಷನಲ್ ನಿರಂತರವಾಗಿ ಎಲ್ಲಾ ರೀತಿಯ ಅಪ್‌ಡೇಟ್ ನೀಡಲಿದೆ.

